೧೦. ದಾವಣಗೆರೆ ನಗರದ ರಾಮಕೃಷ್ಣ ಹೆಗಡೆ ನಗರದಲ್ಲಿ ನೂರು ಗುಡಿಸಲುಗಳು ಸುಟ್ಟಿರುವುದು

ಶ್ರೀ ಪಂಪಾಪತಿ.— ದಾವಣಗೆರೆಯಲ್ಲಿ ಸುಮಾರು ಒಂದು ತಿಂಗಳ ಹಿಂದೆ ಶ್ರೀ ರಾಮಕೃಷ್ಣ ಹೆಗಡೆ ನಗರದಲ್ಲಿ ಸುಮಾರು ೧೮೦ ಗುಡಿಸಲುಗಳು ಸುಟ್ಟು ಹೋಗಿವೆ. ಅಲ್ಲಿ ವಾಸವಾಗಿದ್ದ ಜನರೆಲ್ಲರೂ ಅಲ್ಪಸಂಖ್ಯಾತರು ಅನುಸೂಚಿತವರ್ಗದವರು ಮತ್ತು ಆರ್ಥಿಕ ದುರ್ಬಲವರ್ಗದವರಾಗಿರುವುದರಿಂದ ಇವರೆಲ್ಲರಿಗೂ ನಗರಾಭಿವೃದ್ಧಿ ಮಂಡಲಿ ದಾವಣಗೆರೆ ಇವರು ನಿರ್ಮಿಸಿರುವ ಶ್ರೀ ಎಸ್. ನಿಜಲಿಂಗಪ್ಪ ನಗರದಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ಕೊಡುವ ಸೈಟುಗಳನ್ನು ಕೊಟ್ಟಲ್ಲಿ ಸರ್ಕಾರ ಮನೆ ಕಳೆದು ಕೊಂಡ ಬಡ ಜನರಿಗೆ ಲ್ಯಾಂಡ್ ಆರ್ಮಿ ಮೂಲಕ ಮನೆಗಳನ್ನು ಕಟ್ಟಲು ಅನುಮತಿ ದೊರೆತಿರುವುದಾಗಿ ತಿಳಿದು ಬಂದಿದೆ, ಆದ್ದರಿಂದ ಈ ಬಡಜನರಿಗೆ ನಗರಾಭಿವೃದ್ಧಿ ಮಂಡಳಿಯವರಿಗೆ ಕೂಡಲೇ ತಾವು ಶಿಫಾರಸ್ ಮಾಡಿ ನಿವೇಶನಗಳನ್ನು ಪುಕ್ಕಟೆಯಾಗಿ ಕೊಡುವಂತೆ ತಾವು ಸಹಾಯ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.— ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ನಾಳೆ ಉತ್ತರ ಹೇಳುವುದಾಗಿ ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿದ್ದಾರೆ.

೧೧ ಚಿಕ್ಕನಾಯಕನ ಹಳ್ಳಿಯಲ್ಲಿ ೪೯ ಬೋರ್‌ವೆಲ್‌ಗಳನ್ನು ಹಾಕಿಸುವುದು

ಶ್ರೀ ಬಿ. ಲಕ್ಕಪ್ಪ.— ಜೀವನಾವಶ್ಯಕ ವಸ್ತುಗಳಲ್ಲಿ ಶುದ್ಧ ಕುಡಿಯುವ ನೀರೂ ಸಹ ಒಂದು. ಗ್ರಾಮಾಂತರ ಪ್ರದೇಶದ ಎಲ್ಲಾ ಗ್ರಾಮಗಳಿಗೂ ಬೋರು ಬಾವಿಯ ಮೂಲಕ ಶುದ್ಧ ನೀರನ್ನು ಕೊಡುವುದು ಸರ್ಕಾರದ ಮೊದಲ ಕರ್ತವ್ಯವಾಗಿದೆ. ಆದರೆ, ನನ್ನ ತಾಲ್ಲೂಕಿನಲ್ಲಿ ಇನ್ನೂ ೪೯ ಗ್ರಾಮಗಳಿಗೆ ಕುಡಿಯುವ ನೀರಿನ ಕೊಳವೆ ಬಾವಿಗಳಿಲ್ಲ. ಕೆಟ್ಟಿರುವ ೮೨ ಕೊಳವೆ ಬಾವಿಗಳು ಹ್ಯಾಂಡ್ ಪಂಪುಗಳ ರಿಪೇರಿಯಾಗಬೇಕಾಗಿದೆ. ಇದನ್ನು ಮಂಡಲ ಪಂಚಾಯಿತಿ, ಹಾಗೂ ಜಿಲ್ಲಾ ಪರಿಷತ್ತುಗಳ ಗಮನಕ್ಕೆ ಜನರು ಈಗಾಗಲೇ ತಂದಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳನ್ನು ಕೇಳಿದರೆ. ರಿಪೇರಿ ಮಾಡಲು ಅಗತ್ಯವಾದ ಉಪಕರಣ ಮತ್ತು ವಾಹನಗಳು ಇಲ್ಲ ಎಂದು ಒಂದೇ ಉತ್ತರ ಕೊಡುತ್ತಾರೆ. ನನ್ನ ತಾಲ್ಲೂಕಿಗೆ ಈ ವರ್ಷ ಕೇವಲ ೫ ಬೋರ್‌ವೆಲ್‌ಗಳನ್ನು ಮಾತ್ರ ಕೊಡಲಾಗಿದೆ, ಇದರಿಂದ ನಮ್ಮ ತಾಲ್ಲೂಕಿನ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಅಸಾಧ್ಯವಾಗಿದೆ. ಆದ್ದರಿಂದ ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಗೆ ವಿಶೇಷ ಆದ್ಯತೆಯ ಮೇಲೆ ೪೯ ಬೋರ್‌ವೆಲ್‌ಗಳು, ೧ ವಾಹನ ಮತ್ತು ರಿಪೇರಿಗೆ ಅಗತ್ಯವಾದ ಉಪಕರಣಗಳನ್ನು ತಕ್ಷಣ ಒದಗಿಸಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಇದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಉತ್ತರವನ್ನು ಕಳುಹಿಸಿಕೊಡುತ್ತೇವೆ.

೧೨; ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಭಾಗ್ಯಜ್ಯೋತಿ ಯೋಜನೆಗೆ ವಿದ್ಯುತ್ ಒದಗಿಸದೇ ಇರುವುದು

ಶ್ರೀ ಗೋಪಾಲ ಮುಕುಂದ ಖಾನಡೆ.— ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯಿಂದ ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಭಾಗ್ಯಜ್ಯೋತಿ ಯೋಜನೆಯ ಮೇರೆಗೆ ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದ್ದು ಆ ಬಗ್ಗೆ ಹಣ ತುಂಬಿದೆ ಇರುವವರ ವಿದ್ಯುತ್ ಸಂಪರ್ಕವನ್ನು ಕಡಿದು ಹಾಕಲಾಗಿದ್ದು. ಅಂತಹವರಿಗೆ ಬಹಳ ತೊಂದರೆಯಾಗಿದೆ. ಈ ಸಂದರ್ಭದಲ್ಲಿ ಮೇಲ್ಕಂಡ ೨ ತಾಲ್ಲೂಕುಗಳಿಗೆ ಈ ಯೋಜನೆಯ ಮೇರೆಗೆ ಎಷ್ಟು ಜನರಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿತ್ತು ಮತ್ತು ಹಣ ತುಂಬಿದೆ ವಿದ್ಯುತ್ ಸಂಪರ್ಕ ಕಡಿದು ಹಾಕಿರುವ ಪ್ರಕರಣಗಳೆಷ್ಟು ಎಂಬುದನ್ನು ತಿಳಿಸಬೇಕಾಗಿ ಸರ್ಕಾರವನ್ನು ಆಗ್ರಹ ಪಡಿಸುತ್ತೇನೆ.